# ವಾರ್ತಾ ವಿಶ್ಲೇಷಣೆ

## ನಗರದ ಮಹಿಳೆಯರೇ ಹೆಚ್ಚು ಶೋಷಿತರು

ಬುಡಕಟ್ಟು ಮಹಿಳೆಯರಿಗೆ ಹೋಲಿಸಿದರೆ ನಗರದ ಮಹಿಳೆಯರೇ ಹೆಚ್ಚು ಶೋಷಿತರು – ಹಾಗೆಂದು ಸಮೀಕ್ಷೆಯೊಂದು ಹೇಳುತ್ತದೆ.

ಮೆಟ್ರೋ ನಗರಗಳು ಸೇರಿದಂತೆ ದೊಡ್ಡ ದೊಡ್ಡ ನಗರಗಳಲ್ಲಿ ಪುರುಷರ ಸರಿಸಮಾನವಾಗಿ ಕಾರ್ಯ ನಿರ್ವಹಿಸುವ ಮಹಿಳೆಯರು ತಮ್ಮ ಮನೆಗಳಲ್ಲಿ ದೈಹಿಕ ಹಾಗೂ ಮಾನಸಿಕ ಶೋಷಣೆಗೆ ಹೆಚ್ಚಿನ ಪ್ರಮಾಣದಲ್ಲಿ ಈಡಾಗುತ್ತಾರೆ. ಅಲ್ಲದೆ ಕೆಲಸ ಮಾಡುವ ಸ್ಥಳಗಳಲ್ಲೂ ಅವರಿಗೆ ಶೋಷಣೆ ತಪ್ಪುವುದಿಲ್ಲ.

ಆದರೆ ಇವಕ್ಕೆ ವ್ಯತಿರಿಕ್ತವಾಗಿ ಬುಡಕಟ್ಟು ಸಮುದಾಯಗಳಲ್ಲಿ ಮನೆಯ ಒಳಗೂ ಹೊರಗೂ ಕಾರ್ಯ ನಿರ್ವಹಿಸುವ ಮಹಿಳೆಯರು ಕಡಿಮೆ ಪ್ರಮಾಣದಲ್ಲಿ ಹಿಂಸೆ, ಶೋಷಣೆಗೀಡಾಗುತ್ತಾರೆ ಎಂದು ಅಸ್ಸೋಚಾಮ್ ವಾಣಿಜ್ಯ ಮಂಡಳಿ ತನ್ನ ವರದಿಯಲ್ಲಿ ತಿಳಿಸಿದೆ.

ನವದೆಹಲಿ, ಬೆಂಗಳೂರು, ಚೆನ್ನೈ, ಕೊಲ್ಕತಾ ಮತ್ತು ಮುಂಬೈ ಮಹಾನಗರಗಳಲ್ಲಿ ಕೆಲಸ ಮಾಡುವ ಸುಮಾರು ಒಂದು ಸಾವಿರ ಮಹಿಳೆಯರನ್ನು 'ಮನೆಯಲ್ಲಿನ ಹಿಂಸೆ' ಕುರಿತು ಸಂದರ್ಶನ ಮಾಡಿದಾಗ ಈ ಅಂಶ ಬೆಳಕಿಗೆ ಬಂದಿದೆ. ದೆಹಲಿ, ಬೆಂಗಳೂರು ಮಹಾನಗರಗಳಲ್ಲಿ ಈ ಹಿಂಸೆಯ ಪ್ರಮಾಣ ಇನ್ನೂ ಹೆಚ್ಚು.

'ಬುಡಕಟ್ಟು ಪ್ರದೇಶಗಳಲ್ಲಿರುವ ಮಹಿಳೆಯರು ಕೆಲಸದ ವಿಷಯದಲ್ಲಿ ಪುರುಷನಷ್ಟೇ ಸಮಾನ' ಎಂದು ವರದಿ ತಿಳಿಸಿದೆ. ದಿನಗೂಲಿಗಳಾಗಿ ಕೆಲಸ ಮಾಡುವ ಬುಡಕಟ್ಟು ಮಹಿಳೆಯರು ಮತ್ತು ಪುರುಷರು ಮೀನು ಹಿಡಿಯುವುದು, ವ್ಯವಸಾಯ ಮಾಡುವುದು ಹಾಗೂ ಕಾಡಿನ ಸಂಪನ್ಮೂಲಗಳ ಸಂಗ್ರಹಣೆ ಕಾರ್ಯಗಳನ್ನು ಸಮಾನವಾಗಿ ನಿರ್ವಹಿಸುತ್ತಾರೆ. 'ಗೃಹಕೃತ್ಯ'ಗಳಲ್ಲೂ ಕೂಡ ಮಹಿಳೆಯೊಂದಿಗೆ ಪುರುಷರೂ ಸಮಾನವಾಗಿ ಕಾರ್ಯ ನಿರ್ವಹಿಸುತ್ತಾರೆ.' ಎಂದು ಕೇಂದ್ರ ಸಾಮಾಜಿಕ ಸಂಶೋಧನೆಯ ಶ್ರೀಮತಿ ರಂಜನಾಕುಮಾರಿ ಹೇಳುತ್ತಾರೆ.

'ಮೆಟ್ರೋ ನಗರಗಳಲ್ಲಿ ಗಂಡನಾದವನು ಹೆಂಡತಿಯ ಯಾವುದೆ ಕೆಲಸಗಳಿಗೆ ಸಹಕರಿಸದೇ ಇರುವುದರಿಂದ ಇಲ್ಲಿನ ಮಹಿಳೆ ಹೆಚ್ಚು ಹಿಂಸೆ ಅನುಭವಿಸಬೇಕಾಗುತ್ತದೆ. ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಗಂಡನದೇ ಮೇಲುಗೈ' ಎಂದು ರಂಜನಾ ವಿಷಾದ ವ್ಯಕ್ತಪಡಿಸಿದ್ದಾರೆ. ಈ ವಾರ್ತೆ 'ಪ್ರಜಾವಾಣಿ'ಯ ಆಗಸ್ಟ್ ೨೩ ರ ಪತ್ರಿಕೆಯಲ್ಲಿ ವರದಿಯಾಗಿದೆ.

'ನಾನು ಪುರುಷ, ಸ್ತ್ರೀ ಎಂಬ ದೇಹಭಾವನೆಯನ್ನು ಹೋಗಲಾಡಿಸಿಕೊಳ್ಳಬೇಕು. ಪುರುಷರು ಸ್ತ್ರೀಗೆ ಸಹಜವಾಗಿರುವ ವಾತ್ಸಲ್ಯ, ಸಹನೆಯಂತಹ ಭಾವನೆಗಳನ್ನು ಅಭ್ಯಾಸ ಮಾಡಬೇಕು. ಸ್ತ್ರೀಯರು ಧೈರ್ಯದಿಂದ ಸಮಾಜದ ಮುಂದಾಳತ್ವವನ್ನು ಸ್ವೀಕರಿಸಬೇಕು' ಎಂದು ಶ್ರೀರಾಮಕೃಷ್ಣ ಪರಮಹಂಸರು ಹೇಳುತ್ತಾರೆ. ಹೀಗಾದರೆ ಮಾತ್ರ ವಿಷಮತೆಯನ್ನು ಹೋಗಲಾಡಿಸಬಹುದು.

## 'ಯಾಂತ್ರಿಕ ಯುಗದಲ್ಲಿ ಶಾಂತಿಯ ಬದುಕು' – ವಿಶೇಷ ಸಂಚಿಕೆ

ಪ್ರಿಯ ಓದುಗರೇ,

ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣಗಳ ಯುಗ ಇದು. ದಿನದಿಂದ ದಿನಕ್ಕೆ ನಮ್ಮ ಬದುಕು ಕೃತಕವಾಗುತ್ತಿದೆ, ಸಹಜತೆ ಮರೆಯಾಗುತ್ತಿದೆ. ಹೆಚ್ಚು ಹೆಚ್ಚು ಹಣಸಂಪಾದನೆಯೆ ನಗರ ಜೀವನದ ಸಂಕೀರ್ಣತೆಗೆ ಕಾರಣವಾಗಿದ್ದರೆ, ನೂತನ ಆರ್ಥಿಕ ನೀತಿಗಳ ಮತ್ತು ಸಾಮಾಜಿಕ ಪ್ರಭಾವಗಳ ಕಪಿಮುಷ್ಟಿಗೆ ಸಿಲುಕಿ ಗ್ರಾಮಗಳ ನೈಸರ್ಗಿಕ ಬದುಕು ಹಾಳಾಗಿಹೋಗಿದೆ. **ಈ ಹುಚ್ಚು ಓಟದ ವೇಗದ ಬಾಳಿನ ನಡುವೆಯೂ ಶಾಂತಿ ನೆಮ್ಮದಿಗಳನ್ನು ಕಾಣಲು ಸಾಧ್ಯವೇ?** – ಎನ್ನುವುದೇ ನಮ್ಮ ಮುಂದಿರುವ ಗಂಭೀರ ಪ್ರಶ್ನೆ. ಈ ಪ್ರಶ್ನೆಗೆ ಉತ್ತರಗಳನ್ನು ಕಂಡುಕೊಳ್ಳುವ ಅಲ್ಪಪ್ರಯತ್ನವೂ ನಮ್ಮ ಬಾಳಿನಲ್ಲಿ ಅಷ್ಟು ಇಷ್ಟು ಸಮಾಧಾನವನ್ನು ತರಬಲ್ಲದು.

ಈ ದೃಷ್ಟಿಯಿಂದಲೇ, 'ವಿವೇಕಪ್ರಭ' ಪತ್ರಿಕೆಯು ತನ್ನ ಒಂಬತ್ತನೆಯ ವರ್ಷದ ಮೊದಲ ಸಂಚಿಕೆಯನ್ನು (ಜನವರಿ ೨೦೦೮) **ಯಾಂತ್ರಿಕ ಯುಗದಲ್ಲಿ ಶಾಂತಿಯ ಬದುಕು** ಎಂಬ ವಿಷಯಕ್ಕೆ ಮುಡಿಪಾಗಿಡುತ್ತಿದೆ. ಈ ವಿಶೇಷ ಸಂಚಿಕೆಯಲ್ಲಿ ಆಧ್ಯಾತ್ಮಿಕ, ಸಾಮಾಜಿಕ, ಶೈಕ್ಷಣಿಕ, ಮನೋವೈಜ್ಞಾನಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ನುರಿತ ಬರಹಗಾರರು ನಗರ ಮತ್ತು ಗ್ರಾಮೀಣ ಜೀವನದ ಹಲವು ಮುಖಗಳ ವಿಶ್ಲೇಷಣೆ ಮಾಡಿ, ಪರಿಹಾರವನ್ನು ಸೂಚಿಸುತ್ತಾರೆ. ಇದರಲ್ಲಿ ಪ್ರಕಟವಾಗುವ ಹಿರಿಯ ಸ್ವಾಮಿಗಳ, ಸಾಹಿತಿಗಳ ಮತ್ತು ವಿಷಯತಜ್ಞರ ಉಪಯುಕ್ತ ಲೇಖನಗಳು ಓದುಗರಿಗೆ ಮಾರ್ಗದರ್ಶಿಯಾಗುವುದರಲ್ಲಿ ಸಂದೇಹವಿಲ್ಲ.

ಈ ಪ್ರಯತ್ನದಲ್ಲಿ ನೀವೂ ನಮ್ಮ ಸಹಭಾಗಿಗಳಾಗಿ. **ಸದ್ಯದ ಯಾಂತ್ರಿಕ ಜೀವನದಲ್ಲಿ ಶಾಂತಿ–ಸಮಾಧಾನಗಳನ್ನು ಹೇಗೆ ಪಡೆಯಬಹುದು?** – ಈ ವಿಚಾರವಾಗಿ ೧೦೦೦ ಪದಗಳಿಗೆ ಮೀರದಂತೆ ನಿಮ್ಮ ಅನುಭವವನ್ನು, ಅನಿಸಿಕೆಯನ್ನು ನಮಗೆ ಬರೆದು ತಿಳಿಸಿ. ವಿಷಯ ಪ್ರಸ್ತಾಪನೆ ಅನುಷ್ಠಾನಪರವಾಗಿರಲಿ; ಉಪಯುಕ್ತವಾಗಿರಲಿ. ಬರಿಯ ಸಿದ್ಧಾಂತ ಬೇಡ. ನಿಮ್ಮ ಕಾರ್ಯಕ್ಷೇತ್ರದಲ್ಲಿ ನೀವು ನಡೆಸಿರುವ ಪ್ರಯತ್ನಗಳು, ಪಟ್ಟ ಕಷ್ಟಗಳು, ಕಂಡುಕೊಂಡ ಪರಿಹಾರಗಳನ್ನು ಸಂಕ್ಷಿಪ್ತವಾಗಿ ಬರೆದು ಕಳಿಸಿ. **ನಿಮ್ಮ ಲೇಖನಗಳು ನಮಗೆ ೧೫.೧೦.೨೦೦೭ರೊಳಗೆ ತಲುಪಬೇಕು. ಉತ್ತಮ ಬರಹಗಳನ್ನು ಪ್ರಕಟಿಸಲಾಗುವುದು.**

– *ಸಂ*